

ಅರುಣ ಪಿ. ಭಟ್ಟ

## ದಿನಾಂಕ 8.8.2019 ರಿಂದ14.8.2019ರವರೆಗೆ.




ಅಷ್ಟಮದಲ್ಲಿ ಗುರು ಚಂದ್ರ ಯೋಗ. ಆಶ್ಚರ್ಯಕರ ಫಲ ನೀಡುತ್ತದೆ. ಅರ್ಧಕ್ಕೆ ನಿಂತ ಕೆಲಸ ಮುಂದುವರೆಯುತ್ತದೆ. ಮಂಗಳ ರಾಶಿ ಭ್ರಮಣ ನೆಗಡಿ, ಶೀತ, ಜ್ವರದಿಂದ ಪೀಡೆ. ತಾಯಿಗೆ ಅನುಕೂಲ. ನೀರಿನ ಸಮಸ್ಯೆ ಬಗೆಹರಿಯುವುದು.

**ಶುಭದಿನ: 12.** ಶನಿಪೀಡೆ ನಿವಾರಣೆಗೆ ಪೂಜೆ ಪ್ರಾರ್ಥನೆ ಮಾಡಿರಿ.




ಪ್ರಾರಂಭದಲ್ಲೇ ವಿಶೇಷ ವಸ್ತು ಖರೀದಿ. ಪತಿ ಪತ್ನಿಯರ ಆರೋಗ್ಯ ಸ್ಥಿರವಾಗಿರುವುದು ಸ್ಪರ್ಧಾತ್ಮಕತೆಯಲ್ಲಿ ಯಶಸ್ಸು. ಯಂತ್ರ ಮತ್ತು ವಾಹನಗಳಲ್ಲಿ ಸಮಸ್ಯೆ ಬಂಧುಗಳಲ್ಲಿ ವೈಮನಸ್ಸು ಸಾಧ್ಯತೆ ಕುಟುಂಬಕ್ಕಾಗಿ ಖರ್ಚು. ಪ್ರವಾಸ ಸಾಧ್ಯತೆ.

**ಶುಭದಿನ: 13.** ಗಣಪತಿ ಸುಬ್ರಮಣ್ಯ ಜಪ ಮಾಡಿರಿ.




ಹಲವು ದಿನಗಳ ಕೌಟುಂಬಿಕ ಸಮಸ್ಯೆ ಬಗೆಹರಿಯುವುದು. ಹೊಸ ಸೇವಕರು ಸಿಗುವರು. ಆದರೆ ಕೈಗೆ ನರದ ನೋವು ಕಾಣಿಸುವ ಸಂಭವ. ಬಂಧುವಿರೋಧ. ವಾರಾಂತ್ಯದಲ್ಲಿ ಸಣ್ಣ ಪ್ರವಾಸ. ವ್ಯಾಪಾರದಲ್ಲಿ ನಷ್ಟ ಸಂಭವ. ವಿನಾಕಾರಣ ಹೆದರಿಕೆ.

**ಶುಭದಿನ: 12.** ಶನಿಸ್ತೋತ್ರ ಮಾಡಿರಿ. ಹನುಮಾನ್ ಚಾಲಿಸ್ ಪಠಿಸಿ.




ಆರೋಗ್ಯ ಸುಧಾರಿಸುವುದು. ಅಕಸ್ಮಿಕ ಖರ್ಚು ಸಂಭವ. ಆಸ್ತಿ ಖರೀದಿ ಬಗ್ಗೆ ಚಿಂತನೆ ಕಲಾವಿದರಿಗೆ– ಸಾಹಿತಿಗಳಿಗೆ ಉತ್ತಮ ವಾರ ರಾಜಕಿಯದ ಅವಕಾಶ. ಸಂಘ ಸಂಸ್ಥೆಗಳಿಂದ ಧನಲಾಭ. ಶತಗುರುಗಳು ಹಿಂದೆ ಸರಿಯುವರು.

**ಶುಭದಿನ: 14.** ಚಂಡಿ ಪಾರಾಯಣ ಮಾಡಿರಿ.




ನವೋಲ್ಲಾಸ ಬರುವದು. ಧರ್ಮ ದಾನಕ್ಕಾಗಿ ಧನ– ಕನಕ ಖರ್ಚು. ಮಿತ್ರರಿಗೆ ಸಹಾಯ ಮಾಡುವಿರಿ. ಹಲವು ದಿನಗಳ ಜಾಡ್ಯ ಬಗೆಹರಿಯುವುದು. ಹೊಟ್ಟೆನೋವಿನ ಕಾಟ. ಮನೆಯಲ್ಲಿ ಸಂಭ್ರಮದ ವಾತಾವರಣ.

**ಶುಭದಿನ: 10.** ಕೆಂಪು ಹವಳ ಧಾರಣೆ ಮಾಡಿರಿ . ಶಿವ ಕವಚ ಓದಿರಿ.




ಆಕಸ್ಮಿಕ ಖರ್ಚು. ಕಾಲಿಗೆ ನೋವು ಸಂಭವ. ಅಪವಾದ ಭಯ. ಅಧಿಕಾರಿಗಳ ಕೆಂಗಣ್ಣು. ಆದರೆ ವ್ಯಾಪಾರದಲ್ಲಿ ಅಧಿಕ ಲಾಭ. ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ.ಮಹತ್ವದ ಕಾಗದ ಪತ್ರಗಳ ರಕ್ಷಣೆ. ಸಹೋದರ ಸಹಾಯ.

**ಶುಭದಿನ: 14.** ಮಾರುತಿಗೆ ಮುಖ ನೋಡಿದ ಎಣ್ಣೆ ನೀಡಿರಿ.




ವೃತ್ತಿ ವ್ಯವಹಾರದಲ್ಲಿ ಲಾಭ ವ್ಯಾವಹಾರಿಕ ಅನುಕೂಲತೆ. ಸರ್ಕಾರಿ ಕೆಲಸ ಶೀಘ್ರ ಆಗುವುದು. ತಂದೆ ತಾಯಿಯವರ ಆರೋಗ್ಯ ಸುಧಾರಣೆ, ಮಾನ, ಮನ್ನಣೆ ದೊರೆಯುವುದು. ದೂರ ಪ್ರವಾಸ ಸಂಭವ ಕಲಾವಿದರಿಗೆ ಒಳ್ಳೆಯ ವಾರ.

**ಶುಭದಿನ: 10.** ಚಾಮುಂಡಿ ಸ್ತುತಿ ವನದುರ್ಗಾ ಜಪ ಮಾಡಿರಿ.




ನಿರೀಕ್ಷಿತ ಅಧಿಕಾರ ಲಾಭ. ಅಧಿಕಾರಿಗಳಿಗೆ ಪದೋನ್ನತಿಯ ವಾರ. ಬರತಕ್ಕ ಹಣ ಬರುತ್ತದೆ. ಹೆಂಡತಿಯ ತಿರುಗಾಟ. ಆರೋಗ್ಯವಾಗಿರುವಿರಿ. ಕೌಟುಂಬಿಕವಾಗಿ ಅಧಿಕ ಖರ್ಚು. ಕಣ್ಣಿನ ಸಮಸ್ಯೆ ಕಾಣಿಸುವುದು.

**ಶುಭದಿನ: 5.** ರಾಘವೇಂದ್ರ ಸ್ವಾಮಿ ಭಜನೆ ಮಾಡಿರಿ.




ತೂಗುಕತ್ತಿಯ ಭಯ ದೂರಾಗುವುದು. ಮಕ್ಕಳ ವಿದೇಶ ಪ್ರವಾಸಕ್ಕೆ ಸಿದ್ಧತೆ. ಅಕಸ್ಮಾತ್ ವಸ್ತುಲಾಭ. ಕಣ್ಣು, ಕಿವಿ, ನೋವು. ಮನೆಯ ಹೊರಗಡೆ ವಾಸ. ನದಿಯ ಪಾತ್ರದಲ್ಲಿ ಪ್ರವಾಸ ಮಾಡುವಾಗ ಎಚ್ಚರವಹಿಸಿ.

**ಶುಭದಿನ: 14.** ಆದಿತ್ಯ ಹೃದಯ ಪಠಿಸಿರಿ.




ತಾಯಿಗೆ ಅಕಸ್ಮಾತ್ ಬೇನೆ. ಜಮೀನಿನ ಕೆಲಸಗಾರರು ಕೈಕೊಡುವರು. ವಾಹನ ಅಪಘಾತ ಭಯ. ಮಿತ್ರರಿಂದಲೂ ಅಪವಾದ ಸಾಧ್ಯತೆ. ಸ್ಪರ್ಧಾತ್ಮಕ ವಿಷಯದಲ್ಲಿ ಅಚಾನಕ್ ಯಶಸ್ಸು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ.

**ಶುಭದಿನ: 14.** ಗಣಹೋಮ ಮಾಡಿ. 108 ಮೋದಕ ನೈವೇದ್ಯ ಮಾಡಿ.




ಅಧಿಕಾರಿಗಳಿಗೆ ಪೂರ್ವದಿಕ್ಕಿಗೆ ವರ್ಗಾವಣೆ. ಸ್ತ್ರೀಗೆ ಅನಾರೋಗ್ಯ. ಮನೆ ಬದಲಾವಣೆ ಪ್ರಕ್ರಿಯೆ. ವಾರಾಂತ್ಯ ಧನಲಾಭ. ಮನೆ ಕೆಲಸದವರು ಬರುತ್ತಾರೆ. ಚುನಾವಣೆಯಲ್ಲಿ ಅಪಯಶ. ಕೆಂಪುಬಣ್ಣದ ಯಂತ್ರಗಳ ಖರೀದಿಗೆ ಸುಸಮಯ.

**ಶುಭದಿನ: 9.** ಶತ್ರು ಕಾಟ ನಿವಾರಣೆಗೆ ವಿಷ್ಣು ಸಹಸ್ರನಾಮ ಪಠಿಸಿರಿ.




ಕುಟುಂಬದಲ್ಲಿಯ ಸದಸ್ಯರ ವಿರೋಧ. ಬರಬೇಕಾದ ಬಾಕಿ ಬರುತ್ತದೆ. ಮಕ್ಕಳು ಹೆಸರು ಗಳಿಸುವರು. ಶೇರು ವ್ಯವಹಾರಗಳಲ್ಲಿ ಅಧಿಕ ಲಾಭ. ಹೃದಯ ಸಂಬಂಧಿ ಕಾಯಿಲೆ ಇರುವವರು ಎಚ್ಚರಿಕೆಯಿಂದಿರಿ. ಉತ್ತಮ ಪ್ರವಾಸ.

**ಶುಭದಿನ: 13.** ಸ್ತ್ರೀಯರು ಬಿಳಿ ಮುತ್ತು, ಪುರುಷರು ಕೆಂಪು ರತ್ನ ಧರಿಸಿ.

DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ
